7. ಯಾವ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಐಯಿಂದ ಚಿಕಟಾಯಿಸಲ್ಪಡುವದು.

8. ದರಖಾಸ್ತುಗಳ ವೈಕಿ ಬಂದು ದರಖಾಸ್ತು ಮಂಜೂರಾದ ಕೂಜ್ಲೆ ಆನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ಬಾಬುವಾರು.	ಅಂದಾಜಿಗೆ.	ದರ.	ಪರಿಮಾಣ.	ಸ್ಟೇಶನ್
ಪಾಯಬೋದೀ ಕೆಲಸ	ಸಲಿಗಜ		906	
ಕಲ್ಲು ಸುಂಣದಿಂದ ಪಾಯಪೂರ್ತಿ ಜೇಸ್ ಮಟ್ಟು ..	ಸಲಿಅಡಿ		16290	
ಇಟ್ಟಿಗೆ ಸುಂಣದಿಂದ ಗೋಡೆ	ಡಿಟೋ		26608	
ಡಿಟೋ ಕವರ್ಸ್ ಕೆಲಸ	ಡಿಟೋ		2430	
ಸದರೀ	ಡಿಟೋ		513	
ಸುಂಣದಿಂದ ಗಿಲಾವು	ಚದರ		469·84	
ಸುಂಣದಿಂದ ಸಂದುಗಾರೆ	ಡಿಟೋ		17·10	
ಸುಂಣ ಬಳಿಯುವದು	ಡಿಟೋ		196·90	
ಬಣ್ಣ ಬಳಿಯುವದು	ಡಿಟೋ		272·94	
ಕಾರ್ನೀಸ್ (ವಂದೂವರೆ ಅಡಿ ಹೂರಡಿಸುವದು)	ಲಾಂಬಿ ಅಡಿ		810	
ಡಿಟೋ (ವಂದು ಅಡಿ ಡಿಟೋ) ..	ಡಿಟೋ		320	
ಕಂಭಗಳ ತಲೆಸುತ್ತು ಕಾರ್ನೀಸ್	ಡಿಟೋ		208	
ಜನಲು ಸುತ್ತು ತೆರಣಿ	ಡಿಟೋ		10·44	
ವಜ್ಜಗಾರೆ	ಚದರ ಅಡಿ		84·54	
ತಾರನು	ಡಿಟೋ		217·74	
ತ್ಯಾಗದ ಮರದ ಕೆಲಸ	ಸಲಿಅಡಿ		2062	
ಮೆಟ್ಟಿಲ ಚಪ್ಪಡಿ	ಚದರಡಿ		128	
ಕದಗಳು	ಡಿಟೋ		832	
ಜನಲುಗಳು	ಡಿಟೋ		1120	
ಮೇಲೆ ಚಿಕ್ಕ ಜನಲುಗಳು	ಡಿಟೋ		336	
ಕನ್ನಡಿ ಅರ್ಧ ಕವರ್ಸ್ ಜನಲುಗಳು	ಡಿಟೋ		416	
ಬಿದರ ಚಾಪೆ ಜೆನ್ನು ತೆಪ್ಪೆಯಿಂದ ಮಾಡಿದ್ದು	ಡಿಟೋ		71·13	
ಮರದೆಂಣೆ ಕೆಲಸ				
ಜಿಂಕ್ ಕೊಳಾಯಿಗಳು				

ಟಿ. ಆರ್. ಸ್ಕಾಲ್ಡ್‌ವೆಲ್,
ಎಗ್ಜಿಕ್ಯೂಟಿವ್ ಇಂಜನಿಯರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 9ನೇ ಡಿಸಂಬರ್ 1889.

ಗೋಲ್ಡ್‌ಮೈನ್ಸ್‌ಯಾನೆ ಭಂಗಾರ ಗಣಿಗಳಿಗೆ ಸಂಬಂಧ ಬಗ್ಗೆ.

ಇದರಿಂದ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟ್ ಬೌಂಡರಿಂಗ್‌ಪ್ಯಾಟಿ ಮತ್ತು ಮಾಲೂರು ತಾಲ್ಲೂಕುಗಳಿಗೆ ಕೀರಿದ ಕಾಮಸಂದ್ರದ ಜಂಗಲ್ ವೈಕಿ ಈ ಕೆಳಗೆ ವಿವರಿಸಲ್ಪಟ್ಟಿರುವ 3 ಮತ್ತು 4ನೇ ನಂಬರು ಬ್ಲಾಕುಗಳಲ್ಲಿ ಬಂದು ಆಥವಾ ಎರಡು ವರುಷಗಳ ವರಿಗೆ ಸವ್ರದೆ ಕಪದುಕೊಳ್ಳುವ ಪಕ್ಷನ್ನು ಅಪೇಕ್ಷಿಸತಕ್ಕವರಿಂದ ಪ್ರತಿ ಬಂದು ಬ್ಲಾಕಿಗೂ ೭ರೆಪೇರೆ ಬರುವ ಮೊಪರ್ ಮಾಡಿದ ದರ ಖಾಸ್ತುಗಳನ್ನು ಕೋಲಾರ ಡಿಸ್ಟ್ರಿಕ್ಟ್ ಹೆಪ್ಯುಟಿ ಕಮ್ಮಿಷನರ್ ಸಾಹೇಬರವರು 1890ನೇ ಇಸವಿ ಜನವರಿ 22ನೇ ತಾರೀಖಿನವರಿಗೆ ತೆಗದುಕೊಳ್ಳುವರು.—

2. ಈ ಪ್ರತಿ ಬಂದು ಬ್ಲಾಕಿನಿಂದ ಸಂಣ ಸಂಣ ತುಂಡುಗಳಾಗಿ ಕೊಯಿದು ವೇರಿಸಿದ 68 ಸಲೆ ಅಡಿಗಳುಳ್ಳ ಟೀ ಬಂದಕ್ಕೆ ಅಯಾ ದರಖಾಸ್ತುದಾರರು ಕೊಡಲು ಒಪ್ಪುವ ಸೀನಿಯರೇಜ್ ತೀರ್ವದು ಹೆಚ್ಚು ದರವನ್ನು ಅವರವರ ದರಖಾಸ್ತಿನಲ್ಲಿ ನಮೂದಿಸಿ ಇರಬೇಕು. ನಗದು ಅಥವಾ ನೋಟು ಮೂಲಕ (300) ರೂಪಾಯಿಗಳ ಡಿಪಾಜಿಟ್ ಮೊಬಲಗಿನ ಸಮೇತ ಬಾರದ ಇರುವ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ.

3. ಈ ಬ್ಲಾಕಿನಲ್ಲಿ ಯಾವ ಪ್ರದೇಶದಲ್ಲಿ ಮರ ಕಡಿಯತಕ್ಕದ್ದೋ ಅದನ್ನು ಕಡಿಯತಕ್ಕ ಮರಗಳನ್ನು ಸಹ ಫಾರೆಸ್ಟ್ ಇಲಾಖೆಯವರು ಗುರ್ತು ಮಾಡುತ್ತಾರೆ. ಹಾಗೆ ಗುರ್ತು ಮಾಡಲ್ಪಟ್ಟ ಮರಗಳನ್ನು ಮಾತ್ರಾ ಕಂಟ್ರಾಕ್ಟುದಾರನು ಫಾರೆಸ್ಟ್ ಇಲಾಖೆಯವರು ನೇಮಿಸುವ ರೀತಿಯಲ್ಲಿ ಕಡದುಕೊಳ್ಳುವದಕ್ಕೆ ಬದ್ಧನಾಗಿ ಮುಚ್ಚಳಿಕೆ ಬರದುಕೊಡಬೇಕು, ಈ ಷರತ್ತುಗಳಿಗೆ ತಪ್ಪಿದರೆ ಸರಕಾರದವರು ಗೊತ್ತು ಮಾಡುವ ಜುರ್ಮಾನೆ ತೆರಲಿಕ್ಕೆ ಗುರಿಯಾಗಿರುವದಾಗಿ ಸದರೀ ಮುಚ್ಚಳಿಕೆಯಲ್ಲಿ ನಮೂದಿಸಬೇಕು. ಸ್ವೀಸಿಕೊಳ್ಳಲ್ಪಟ್ಟು ಇರುವ ಜಾತಿ ಮರಗಳನ್ನು ಫಲವೃಕ್ಷಗಳನ್ನು ಅಥವಾ ಇತರ ಜೆನಸಿ ಜುಟ್ಟುವಳೆಯಾಗತಕ್ಕ ಮರಗಳನ್ನು ಸ್ಪ್ಯಾಂಡರ್ಡ್ ಯಂಬದಾಗಿ ವುಳಿಸಿಕೊಳ್ಳಲ್ಪಡುವ ಮರಗಳನ್ನು ಕಡಿಯಕೂಡದು ಮತ್ತು ಅವುಗಳ ರೆಂಬೆಗಳನ್ನು ಸವರಲೂ ಕೂಡದು.

4. ಕಂಟ್ರಾಕ್ಟುದಾರರು ತಮ್ಮ ತಮ್ಮ ಬ್ಲಾಕಿನ ಪೈಕಿ ಡಿಮಾರ್ಕೇರ್ಷ ಲೈನಿನಲ್ಲಿರತಕ್ಕ ಮರಗಳನ್ನು ಕಡಿಯಲು ಬದ್ಧರಾಗಿ ತಕ್ಕದ್ದು.

5. ಈ ವಿಷಯದಲ್ಲಿ ಮೇಲೆ ನಮೂದಾಗುವದಕ್ಕಿಂತ ಹೆಚ್ಚು ತಪಶೀಲಿಗಳು ತಿಳಿಯಬೇಕಾಗಿ ಯಿದ್ದಲ್ಲಿ ಅವುಗಳನ್ನು ಕಂಟ್ರಾಕ್ಟಿನ ಷರತ್ತುಗಳನ್ನು ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹಬರವರ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

6. ಮೊಕರ್ರಾಡಿದ ದರಖಾಸ್ತುಗಳನ್ನು ಸ್ರ್ 1890ನೇ ಇಸವಿ ಜನವರಿ 22ನೇ ತಾರೀಖು ಮಧ್ಯಾನ್ಹ 12 ಘಂಟೆಗೆ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಆಫಿಸಿನಲ್ಲಿ ಡೆಪ್ಯುಟಿ ಕಮ್ಮಿಷನ್ನರವರಾಗಲಿ ಅಥವಾ ಅವರು ನೇಮಿಸುವ ಇತರ ಆಫಿಸರರಾಗಲಿ ಆಗ್ಯೆ ಹಾಜರಿರುವ ದರಖಾಸ್ತುದಾರರ ಸಮಕ್ಷಮ ವೋಡಿದು ನೋಡುವರು.

7. ಡೆಪ್ಯುಟಿ ಕಮ್ಮಿಷನರವರು ಕಾರಣ ನಮೂದಿಸದೆ ಯಾವ ದರಖಾಸ್ತನ್ನಾದರೂ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡು ಯಿದ್ದಾರೆ.

8. ಯಾವ ಮನುಷ್ಯನ ದರಖಾಸ್ತು ಅಂಗೀಕರಿಸಲ್ಪಡುವದೋ ಅವನ ಡಿಪಾಜಿಟ್ ವೊಬಲಗು ನಿಲ್ಲಿಸಿಕೊಳ್ಳಲ್ಪಡುವದು, ಆಂಥಾ ದರಖಾಸ್ತುದಾರನ ದರಖಾಸ್ತು ಮಂಜೂರಾದ ಸಂಗತಿ ಅವನಿಗೆ ತಿಳಿಸಲ್ಪಟ್ಟ (10) ದಿವಸಗಳ ವೊಳಗಾಗಿ ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಸದರೀಯವನು ಅವಶ್ಯಕವಾದ ಮುಚ್ಚಳಿಕೆ ಬರದುಕೊಡಬೇಕು, ಮತ್ತು ಕಂಟ್ರಾಕ್ಟು ಷರತ್ತುಗಳ ಪ್ರಕಾರ ಕ್ರಮವಾಗಿ ನಡದುಕೊಳ್ಳಲು ಜಾಮೀನ್ ತರ್ಕ್ ನಗದು 500 ರೂಪಾಯಿ ಠೇವಣಿ ಯಿಡಬೇಕು, ಇದಕ್ಕೆ ತಪ್ಪಿದರೆ ಅವನ ಡಿಪಾಜಿಟ್ ವೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

9. ದರಖಾಸ್ತುದಾರರು ತಾವು ಕಳುಹಿಸುವ ದರಖಾಸ್ತುಗಳ ಮೇಲೆ "ಕಾವುಸಂದ್ರದ ಜಂಗಲ್ ಪೈಕಿ (ಸಂದರ್ಭಾನುಸಾರ) 3 ಅಥವಾ 4ನೇ ಬ್ಲಾಕಿನಿಂದ ಸಾದೆ ಕಡದು ತರುವ ಹಕ್ಕಿಗೋಸ್ಕರ ಕಳುಹಿಸಲ್ಪಟ್ಟ ದರಖಾಸ್ತು" ಯೆಂದು ಬರಿಯಬೇಕು.

3ನೇ ನಂಬರು ಬ್ಲಾಕಿನ ವಿವರಣೆ:—(ತಮಟಮಾಕನಹಳ್ಳಿ ಮೂತನೂರು ಜಂಗಲ್.)

ಚಕ್ಕುಬಂದಿ.

ಪೂರ್ವಕ್ಕೆ—ತಮಟಮಾಳನಹಳ್ಳಿ ಮತ್ತು ಭೀಮಗಾನಹಳ್ಳಿ.

ಪಶ್ಚಿಮಕ್ಕೆ—ಮಲಗಲಹಕ್ಕಿಯಿಂದ ಬೂದೀಕೋಟೆಗೆ ಹೋಗುವ ಛಂಡಿಜಾಡು.

ವುತ್ತರಕ್ಕೆ—ವಲಮಡಗು ದಿನ್ನೂರು ಪಾತರಾಮಗೊಳ್ಳು ಮತ್ತು ಕಾವುಸಂದ್ರದ ಜಂಗಲ್ ಡಿಮಾರ್ಕೇರ್ಷ ಲೈನ್.

ದಕ್ಷಿಣಕ್ಕೆ—ಹರ್ಮಾಜೆಸ್ಟಿಸ್ ಲೀಮೆಯ ಸೇಲಂ ಡಿಸ್ಟ್ರಿಕ್ಟಿಗೂ ಮೈಸೂರು ಲೀಮೆಗೂ ಸರಹದ್ದು ಗ್ರಾಮಗಳಾದ ಬಿದಿಮಡಗೂ ಮತ್ತು ಮಲಗಲಹಕ್ಕಿ ಯಿವುಗಳ ಈಚೆ ಇರತಕ್ಕ ಕಾವುಸಂದ್ರದ ಜಂಗಲ್ ಡಿಮಾರ್ಕೇರ್ಷ ಲೈನ್.

4ನೇ ನಂಬರ್ ಬ್ಲಾಕಿನ ವಿವರಣೆ—(ವ್ಯೆಕಲನಾಯಕನ ಪಾಳ್ಯದ ಪೆಟ್ಟಿದ ಜಂಗಲ್.)

ಚಕ್ಕುಬಂದಿ.

ಪೂರ್ವಕ್ಕೆ—ಮಲಗಲಹಕ್ಕಿ ಯಿಂದ ಬೂದೀಕೋಟೆಗೆ ಹೋಗುವ ಛಂಡಿಜಾಡು.

ಪಶ್ಚಿಮಕ್ಕೆ—ಮಾಲೂರು ತಾಲ್ಲೂಕು ಕೋಡಹಳ್ಳಿ, ಕೊತ್ತೂರು ಗೆಂನಹಳ್ಳಿ, ವ್ಯಾಕಲನಾಯಕನ ಪಾಳ್ಯ ಮತ್ತು ಭೈರಾಗಿ ಮತ ಈ ಗ್ರಾಮಗಳಿಗೆ ಪೂರ್ವ ದಿಕ್ಕಿನಲ್ಲಿರುವ ಕಾವುಸಂದ್ರ ಜಂಗಲ್ ಡಿಮಾರ್ಕೇರ್ಷ ಲೈನ್.

ವುತ್ತರಕ್ಕೆ—ಬವೆರಿಂಗ್‌ಪೇಟೆ ತಾಲ್ಲೂಕು ಪಾತರಾಮಗೊಳ್ಳು ಮತ್ತು ಮಾಲೂರು ತಾಲ್ಲೂಕು ಗೊಡಗಹಳ್ಳಿ ಈ ಗ್ರಾಮಗಳ ಸರಹದ್ದಿನಲ್ಲಿರುವ ಕಾವುಸಂದ್ರ ಜಂಗಲ್ ಡಿಮಾರ್ಕೇರ್ಷ ಲೈನ್.

ದಕ್ಷಿಣಕ್ಕೆ—ಸೇಲಂ ಡಿಸ್ಟ್ರಿಕ್ಟು ಮಲಗಲಹಕ್ಕಿ ಮತ್ತು ಚಿನ್ನಾರದೊಡ್ಡಿ ಈ ಗ್ರಾಮಗಳ ಸರಹದ್ದಿನಲ್ಲಿ ಯಿರುವ ಕಾವುಸಂದ್ರ ಜಂಗಲ್ ಡಿಮಾರ್ಕೇರ್ಷ ಲೈನ್